ಅ) ಹಾಗಿದ್ದಲ್ಲಿ ೬ ತಿಂಗಳ ಬಿಲ್ಲನ್ನು ಒಮ್ಮೆಲೆ ಪಾವತಿ ಮಾಡುವಲ್ಲಿ ಗ್ರಾಹಕರು ಕಷ್ಟ ಪಡುತ್ತಿರುವುದು ಸರ್ಕಾರದವರಿಗೆ ತಿಳಿದಿದೆಯೇ;

ಇ) ಗ್ರಾಹಕರಿಗಾಗುತ್ತಿರುವ ತೊಂದರೆಯನ್ನು ತಪ್ಪಿಸಲು ತಿಂಗಳಿಗೊಮ್ಮೆ ಬಿಲ್ಲನ್ನು ನೀಡುವ ಪದ್ಧತಿಯನ್ನು ಜಾರಿಗೆ ತರಲಾಗುವುದೇ;

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಈ ಕೆಳಕಂಡ ವಿಧವಾದ ವರ್ಗಗಳನ್ನು ಬಿಟ್ಟರೆ ಮಿಕ್ಕ ಎಲ್ಲಾ ರೀತಿಯ ಗ್ರಾಹಕರಿಗೆ ತಿಂಗಳಿಗೊಮ್ಮೆ ಬಿಲ್ಲು ಸಲ್ಲಿಸಲಾಗುತ್ತದೆ.

೧) ನೀರಾವರಿ ಪಂಪುಸೆಟ್ಟುಗಳ (೧೦ ಅಶ್ವಶಕ್ತಿ ಮತ್ತು ಅದಕ್ಕೆ ಕಡಿಮೆಯವು) ಬಿಲ್ಲನ್ನು ಮಾತ್ರ ೬ ತಿಂಗಳಿಗೊಮ್ಮೆ ಕೊಡಲಾಗುತ್ತದೆ.

೨) ಮನೆ ದೀಪದ ಬಳಕೆದಾರರಿಗೆ ಎರಡು ತಿಂಗಳಿಗೊಮ್ಮೆ ಬಿಲ್ಲು ನೀಡಲಾಗುತ್ತದೆ.

ಆ) ೧೦ ಮತ್ತು ಅದಕ್ಕೆ ಅಶ್ವಶಕ್ತಿಯ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಶುಲ್ಕವು ಮತ್ತು ಅಶ್ವಶಕ್ತಿಯ ಆಧಾರದ ಮೇಲೆ ವಿಧಿಸಲಾಗುತ್ತದೆ. ಈ ಗ್ರಾಹಕರು ೬ ತಿಂಗಳಿಗೊಮ್ಮೆ

ಇ) ಹಣ ಮುಂಡಳಿಗೆ ಪಾವತಿ ಮಾಡುವ ಅನುಕೂಲ ಮಾಡಿಕೊಡಲಾಗಿದೆ. ಆದರೆ ಅವರು ಇಚ್ಛೆ ಪಟ್ಟಲ್ಲಿ ೬ ತಿಂಗಳ ಹಣವನ್ನು ಆ ಅವಧಿಯೊಳಗೆ ಒಂದೆರಡು ಕಂತುಗಳಲ್ಲಿ ನೀಡಿದರೂ ಮುಂಡಳಿ ಸ್ವೀಕರಿಸುತ್ತದೆ.

ಭೂಮಿಯಲ್ಲಿಯೂ ಜಲದ ಪಾತಳಿ ಹೆಚ್ಚಿಸುವ ಬಗ್ಗೆ

೮೩೩. ಶ್ರೀ ಚಂದ್ರಕಾಂತ್ ಜಿ. ಬಿಲ್ಲದ (ಧಾರವಾಡ).— ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂಮಿಯಲ್ಲಿಯೂ ಜಲದ ಪಾತಳಿ ಹೆಚ್ಚಿಸಲು ಸರಕಾರದವರು ಯಾವ ಯೋಜನೆ ಮಾಡಿರುವರು ಹಾಗೂ ಅದರ ಕಾರ್ಯವಿಧಾನದ ವಿವರಣೆ ನೀಡುವುದು;

ಆ) ಸಧ್ಯ ಇರುವ ಕೊಳವೆ ಭಾವಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೀರುಪಾತಳಿ ಕೆಳಗೆ ಹೋಗಿರುವ ಬಗ್ಗೆ ರಾಜ್ಯದ ಅನೇಕ ಕಡೆಗಳಿಂದ ಸರಕಾರದ ಗಮನಕ್ಕೆ ದೂರುಗಳು ಬಂದಿವೆಯೇ? ಹಾಗಿದ್ದಲ್ಲಿ ಅವುಗಳ ಬಗ್ಗೆ ಸರಕಾರದವರು ಯಾವ ಕ್ರಮ ತೆಗೆದುಕೊಂಡಿರುವರು?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಇಲಾಖಾವತಿಯಿಂದ ಯಾವುದೇ ಯೋಜನೆಗಳು ನಡೆಯುತ್ತಿಲ್ಲ.

ಆ) ಹೌದು

ಬಾವಿಗಳ ತೋಡುವಿಕೆಯನ್ನು ಕಾನೂನು ರೀತ್ಯಾ ನಿಯಂತ್ರಿಸಲು ಹೊಸ ಶಾಸನವನ್ನು ರೂಪಿಸುವ ಪ್ರಸ್ತಾವವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಬಳ್ಳಾರಿ ಜಿಲ್ಲೆಯಲ್ಲಿರುವ ಗಣಿಗಳ ಬಗೆಗೆ

೮೪೩. ಶ್ರೀ ಯು. ಭೂಪತಿ (ಸಂಡೂರು) ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಕಬ್ಬಿಣದ ಅದಿರು ಹಾಗೂ ಮ್ಯಾಂಗನೀಸ್ ಗಣಿಯನ್ನು ಗುತ್ತಿಗೆ ಪಡೆದಿರುವವರ ಸಂಖ್ಯೆ ಎಷ್ಟು? ಅವರುಗಳ ಹೆಸರು ಮತ್ತು ವಿಳಾಸಗಳನ್ನು ಮತ್ತು ಗಣಿಯ ವಿಸ್ತೀರ್ಣಗಳ ವಿವರ ಒದಗಿಸುವುದು;